**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

## C.C No.233/2024

| | | | |
|---|---|---|---|
| ಸಾಕ್ಷಿದಾರರ ಹೆಸರು | : ದೇವರಾಜ ಸಾಳೇರ | | ***P.W-9*** |
| ತಂದೆಯ ಹೆಸರು | : ಸಣ್ಣಮರಿಯಪ್ಪ | | ***C.W-13*** |
| ವಯಸ್ಸು | : 61 ವರ್ಷ | | |
| ಉದ್ಯೋಗ | : ನಿವೃತ್ತ ಪಿಎಸ್ಐ | | |
| ವಾಸ | : ಹಾವೇರಿ | | |

**ದಿನಾಂಕಃ 28-04-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ನಾನು 2011 ರಿಂದ 2014 ರವರಗೆ ರಾಣೆಬೆನ್ನೂರ ಶಹರ ಪೋಲಿಸ್ ಠಾಣೆಯಲ್ಲಿ ಹೆಚ್.ಸಿ ಆಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿಃ 31-08-2015 ರಂದು ನಾನು ಠಾಣೆಯಲ್ಲಿ ಎಸ್.ಹೆಚ್.ಓ ಕರ್ತವ್ಯದಲ್ಲಿದ್ದಾಗ ಮಧ್ಯಾಹ್ನ 2.30 ಗಂಟೆ ಸಮಯದಲ್ಲಿ ಚಾಸಾ-1 ರವರು ಠಾಣೆಗೆ ಹಾಜರಾಗಿ ಲಿಖಿತ ಪಿರ್ಯಾದಿಯನ್ನು ನೀಡಿದ್ದು ಅದನ್ನು ಸ್ವೀರಿಕೊಂಡು ರಾಣೆಬೆನ್ನೂರ ಶಹರ ಪೊಲೀಸ ಠಾಣಾ ಗುನ್ನಾ ನಂ.128/2015 ರಲ್ಲಿ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೂ ಮತ್ತು ಮೇಲಾಧಿಕಾರಿಗೂ ನಿವೇದಿಸಿ ಕೊಂಡಿರುತ್ತೇನೆ. ಸದರಿ ದೂರನ್ನು ಈಗಾಗಲೇ ನಿ.ಪಿ-1 ಎಂದು ಗುರುತಿಸಲಾಗಿದ್ದು, ಷರಾ ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ-1(ಬಿ) ಮತ್ತು 1(ಸಿ) ಎಂದು ಗುರುತಿಸಲಾಯಿತು. ಸದರಿ ಪ್ರಥಮ ವರ್ತಮಾನ ವರದಿಯನ್ನು ನಿ.ಪಿ-28 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ-28(ಎ) ಎಂದು ಗುರುತಿಸಲಾಯಿತು. ನಂತರ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ-14 ರವರಿಗೆ ವಹಿಸಿ ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ.ಎಫ್.ಎಂ.ಎಂ. ವಕೀಲರಿಂದಃ**

ದೂರನ್ನು ಸ್ವೀಕರಿಸಿದ ನಂತರ ನಾನು ಆರೋಪಿಯನ್ನು ಕರೆದು ವಿಚಾರಣೆ ಮಾಡಿರುವುದಿಲ್ಲ. ಸಾಮಾನ್ಯವಾಗಿ ಕೌಟುಂಬಿಕ ಕಲಹದ ಬಗ್ಗೆ ಯಾರಾದರೂ ದೂರು

ಕೊಟ್ಟರೆ ಅವರನ್ನು ಕರೆದು ವಿಚಾರಣೆ ಮಾಡಬೇಕು ಎಂದು ಮಾನ್ಯ ಸರ್ವೋಚ್ಛ ನ್ಯಾಯಾಲಯದ ನಿರ್ದೇಶನ ಇರುತ್ತದೆ ಎಂದರೆ ಸಾಕ್ಷಿ ಅರ್ಜಿ ಕೊಟ್ಟರೆ ಮಾತ್ರ ನಾವು ಕರೆಯಿಸಿ ವಿಚಾರಣೆ ಮಾಡುತ್ತೇವೆ. ದೂರನ್ನು ನೀಡಿದರೆ ನಾವು ಪ್ರಕರಣ ದಾಖಲಿಸುತ್ತೇವೆ ಎಂದು ಹೇಳುತ್ತಾರೆ. ನಾನು ಪಿರ್ಯಾದಿಯನ್ನು ನೋಡಿದ್ದು ಸದರಿ ಪಿರ್ಯಾದಿ ಪ್ರಕಾರ ದಿಃ 12-06-2015 ರಂದು ಘಟನೆಯಾಗಿದೆ ಎಂದು ದೂರಿನಲ್ಲಿ ಬರೆದಿರುತ್ತಾರೆ. ದೂರನ್ನು ತಡವಾಗಿ ನೀಡಲು ಕಾರಣ ಏನು ಎಂದು ನಾನು ವಿಚಾರಣೆ ಮಾಡಿರುವುದಿಲ್ಲ. ಎಫ್.ಐ.ಆರ್ ದಾಖಲಿಸಿಕೊಂಡು ಚಾಸಾ-14 ರವರಿಗೆ ತನಿಖೆ ವಹಿಸಿ ಕೊಟ್ಟಿರುತ್ತೇನೆ. ನಂತರ ಆ ಕೇಸು ಏನಾಯಿತು ಎಂದು ನಾನು ತಿಳಿದು ಕೊಂಡಿರುವುದಿಲ್ಲ. ನಾನು ಮತ್ತು ನನ್ನ ಮೇಲಾಧಿಕಾರಿಗಳು ಪಿರ್ಯಾದಿ ಜೊತೆ ಸೇರಿಕೊಂಡು ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದೂರನ್ನು ಸ್ವೀಕರಿಸಿದ ನಂತರ ಆರೋಪಿತರನ್ನು ಕರೆದು ವಿಚಾರಣೆ ಮಾಡದೇ ಮಾನ್ಯ ಸರ್ವೋಚ್ಛ ನ್ಯಾಯಾಲಯದ ನಿರ್ದೇಶನವನ್ನು ಉಲ್ಲಂಘನೆ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು. x